## 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

## ಎಸ್.ಸಿ. ಸಂಖ್ಯೆಃ 74/2019

ದಿನಾಂಕಃ 16.03.2022
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಜಾಸಾ - 5 ಪ್ರಾಸಾ - 3

| | | |
|---|---|---|
| ಹೆಸರು | ಃ | ಕಿರಣ್ ಕುಮಾರ್ |
| ತಂದೆಯ/ಗಂಡನ ಹೆಸರು | ಃ | ರಾಮಯ್ಯ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಬೈರಸಂದ್ರ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 17.02.2019 ರಂದು ಮೈಲನಹಳ್ಳಿ ಗ್ರಾಮದ ಸರ್ವೇ ಸಂಖ್ಯೆ 76/2 ರ ಜಮೀನಿನಲ್ಲಿ ಶವವೊಂದು ಬಿದ್ದಿದ್ದು, ಆ ಬಗ್ಗೆ ನಾನು ಸದರಿ ಶವವಿದ್ದ ಜಾಗಕ್ಕೆ ಹೋಗಿದ್ದೆನು. ಅಲ್ಲಿ ಪೊಲೀಸರಿಗೆ ಮಾಹಿತಿ ನೀಡಿದ್ದ ಪ್ರಕಾಶ್ ಎಂಬ ವ್ಯಕ್ತಿ, ಪೊಲೀಸರು ಇದ್ದರು. ಆಗ ಸಮಯ ರಾತ್ರಿ 9 – 10 ಗಂಟೆಯಾಗಿತ್ತು. ಪೊಲೀಸರು ಬಿದ್ದ ಶವವನ್ನು ನೋಡಿ ಮಹಜರ್ ಕ್ರಮ ಜರುಗಿಸಿರುತ್ತಾರೆ.

2. ಮಹಜರ್ ಕ್ರಮಕ್ಕೆ ನಾನು ರುಜು ಮಾಡಿರುತ್ತೇನೆ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ರುಜು ಇರುತ್ತದೆ. ನನ್ನ ರುಜುವನ್ನು ಈಗ ನಿಶಾನೆ ಪಿ 2(ಬಿ) ಎಂದು ಗುರುತು ಮಾಡಲಾಯಿತು. ಪೊಲೀಸರು ಶವಕ್ಕೆ ಸಂಬಂಧಿಸಿದಂತೆ ಫೋಟೋಗಳನ್ನು ತೆಗೆದಿರುತ್ತಾರೆ.

ಆ ಫೋಟೋಗಳು ಈಗ ನನಗೆ ತೋರಿಸಿದ ಫೋಟೋಗಳಾಗಿವೆ. ಅವುಗಳನ್ನು ಈಗಾಗಲೇ ನಿಶಾನೆ ಪಿ 3 ಮತ್ತು 4 ಎಂದು ಗುರುತು ಮಾಡಲಾಗಿದೆ.

3. ದಿನಾಂಕ 18.02.2019 ರಂದು ಮಧ್ಯಾಹ್ನ 2 – 3 ಗಂಟೆ ಸಮಯದಲ್ಲಿ ಪೊಲೀಸರು ಪುನಃ ಶವ ಬಿದ್ದಿದ್ದ ಸ್ಥಳಕ್ಕೆ ಬಂದಿದ್ದರು. ಆ ಕಾಲಕ್ಕೆ ಶವಕ್ಕೆ ಸಂಬಂಧಪಟ್ಟ ಒಂದು ಉಂಗುರ, ಕೂದಲು, ಮಾದರಿ ಮಣ್ಣು ಮತ್ತು ಬಟ್ಟೆಯ ಚೂರುಗಳನ್ನು ಅಮಾನತು ಕ್ರಮಕ್ಕೆ ಒಳಪಡಿಸಿ ಮಹಜರ್ ಕ್ರಮ ಜರುಗಿಸಿರುತ್ತಾರೆ. ಆ ಕಾಲಕ್ಕೂ ಸಹ ಮಹಜರ್ ಬರೆದಿದ್ದು, ಪೊಲೀಸರು ತಮ್ಮ ವಶಕ್ಕೆ ಪಡೆದ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆನು. ಆ ಮಹಜರ್ ದಾಖಲೆಗೂ ನಾನು ರುಜು ಮಾಡಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಶಾನೆ ಪಿ 5 ಎಂದು ಗುರುತು ಮಾಡಲಾಗಿದ್ದು, ಅದರಲ್ಲಿರುವ ನನ್ನ ರುಜುವನ್ನು ನಿಶಾನೆ ಪಿ 5(ಬಿ) ಎಂದು ಗುರುತು ಮಾಡಲಾಯಿತು.

4. ನಿಶಾನೆ ಪಿ 5 ರಂತೆ ವಶಕ್ಕೆ ಪಡೆದ ವಸ್ತುಗಳು ಈಗ ನನಗೆ ತೋರಿಸಿದ ವಸ್ತುಗಳಾಗಿದ್ದು, ಅವುಗಳನ್ನು ಈಗಾಗಲೇ ಮುದ್ದೆಮಾಲು 1 ರಿಂದ 9 ಎಂದು ಗುರುತು ಮಾಡಲಾಗಿದೆ.

**<u>ಪಾಟೀ ಸವಾಲುಃ</u> ಶ್ರೀ.ಎಂ.ಪಿ. ವಕೀಲರಿಂದ – ಆರೋಪಿ ಪರವಾಗಿಃ-**

5. ನಾನು ಶವ ಇದ್ದ ಸ್ಥಳಕ್ಕೆ ಪ್ರಥಮ ಬಾರಿಗೆ ಹೋದಾಗ ಕತ್ತಲಾಗಿದ್ದ ಕಾರಣ ಪ್ರಶ್ನಿಸಿದಂತೆ ಸಾಕಷ್ಟು ಜನರು ಇರಲಿಲ್ಲ, ಆದರೆ 10 ರಿಂದ 11 ಜನರು ಇದ್ದರು. ಆ ಕಾಲಕ್ಕೆ ಶವದ ಬಳಿ ಬೇರೆ ಇನ್ನೇನು ವಸ್ತುಗಳು ಇದ್ದವು ಎಂಬ ಬಗ್ಗೆ ನೀವೇನಾದರೂ ಗಮನಿಸಿರುವಿರಾ? ಬೇರೆ ಯಾವುದೇ ವಸ್ತುಗಳನ್ನು ನಾನು ಗಮನಿಸಿರುವುದಿಲ್ಲ. ನೀವು ಪ್ರಥಮ ಬಾರಿಗೆ ಶವವನ್ನು ನೋಡಲು ಹೋದಾಗ ಶವದ ಬಳಿ ವ್ಯಾನಿಟಿ ಬ್ಯಾಗ್ ಒಂದು ಇತ್ತು ಎಂದರೆ ಕತ್ತಲಾಗಿದ್ದ ಕಾರಣ ನಾನು ಅದನ್ನು ನೋಡಿರುವುದಿಲ್ಲ. ನಾನು ಶವ ಇದ್ದ ಸ್ಥಳಕ್ಕೆ ಹೋಗೇ ಇರುವುದಿಲ್ಲ, ಪೊಲೀಸರ ಮಾತಿನ ಮುಲಾಜಿಗೆ ನಿಶಾನೆ ಪಿ 2 ಮತ್ತು 5 ರ ದಾಖಲೆಗೆ ಪೊಲೀಸ್ ಠಾಣೆಯಲ್ಲಿ ರುಜು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.